**ದಿನಾಂಕ: 13.07.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಮುಖ್ಯ ವಿಚಾರಣೆ : ಅರ್ಜಿದಾರ ಪರ ಶ್ರೀ. ಸಿ ಐ ಪಿ ವಕೀಲರಿಂದ

| | |
|---|---|
| ನಿ ಪಿ 9 | ಸಾಕ್ಷಿಯ ಆಧಾರಕಾರ್ಡನ ನೋಟರಿ ಪ್ರತಿಯನ್ನು ಮೂಲ ಪ್ರತಿ ನೋಡಿ ಗುರುತಿಸಿ ಮೂಲ ಪ್ರತಿಯನ್ನು ಅರ್ಜಿದಾರರಿಗೆ ಸೂಕ್ತ ಹಿಂಬರಹದೊಂದಿಗೆ ಮರಳಿಸಲಾಯಿತು. |
| ನಿ ಪಿ 10 | ಒಂದು ಡಿಸ್ಚಾರ್ಜ ಕಾರ್ಡ, ಒಂದು ಅಂತಿಮ ಬಿಲ್, 25 ಮೆಡಿಕಲ್ ಬಿಲ್ಲುಗಳು ಹಾಗೂ ಒಂದು ಎಕ್ಸರೆ ಅವುಗಳನ್ನು ಒಟ್ಟಾರೆಯಾಗಿ |

ಅದರಂತೆ ನಾನು ನನ್ನ ಅರ್ಜಿಯಲ್ಲಿ ಕೋರಿದಂತೆ ಅರ್ಜಿಯನ್ನು ಪುರಸ್ಕರಿಸಲು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ 4 ನೇ ಎದುರುದಾರ ಪರ ಶ್ರೀ. ವಿ ಎಸ್ ಎ ವಕೀಲರಿಂದಃ**

ನಾನು ಹಾಲಿವಸ್ತಿ ಅಂತಾ ಕೊಪ್ಪ ಅಂತಾ ತೋರಿಸಿದ್ದು ನನ್ನ ಮಾವ ಆಗಬೇಕು ಅಂತಾ ಹೇಳಿದ್ದು ಯಾವ ರೀತಿ ಅಂತಾ ಕೇಳಿದಾಗ ಸಾಕ್ಷಿ ತೋದಲಿಸುತ್ತಾ ನನ್ನ ಅಜ್ಜನ ಕಡೆಯಿಂದ ಮಾವನಾಗಬೇಕು ಅಂತಾ ಹೇಳುತ್ತಾರೆ. ಆ ಬಗ್ಗೆ ಯಾವುದೇ ದಾಖಲೆಯನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿಯು ಅವರ ಆಧಾರಕಾರ್ಡ ತರುತ್ತೇನೆ ಎನ್ನುತ್ತಾರೆ. ಅಪಘಾತ ಸಮಯದಲ್ಲಿ ನನಗೆ 42 ವರ್ಷ ವಯಸ್ಸಾಗಿತ್ತು. ನಾನು ವೆಲ್ಡಿಂಗ್ ಮತ್ತು ವ್ಯವಸಾಯ ಕೆಲಸ ಮಾಡಿ ಪ್ರತಿಮಾಹೆ 35 ಸಾವಿರ ರೂಪಾಯಿ ಗಳಿಳುತ್ತಿದ್ದೇನೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ಆ ಬಗ್ಗೆ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಅಪಘಾತದ ದಿನ ಆಟೋದಲ್ಲಿ ನಾನೇ ಹೋಗುತ್ತಿದ್ದೆ. ಆಗ ನಾನು ಚಾಲಕನ ಬಲಬದಿಗೆ ಕುಳಿತಿದ್ದೆ. ದೂರುದಾರನು ನನ್ನ ತಮ್ಮ.ನನ್ನ ಪ್ರಕಾರ ಚಾರ್ಜಶೀಟನಲ್ಲಿ ಮತ್ತು ಪ್ರ.ವ ವರದಿಯಲ್ಲಿ ಕಾಣಿಸಿದ ಸಂಗತಿಗಳು ನಿಜವಾಗಿರುತ್ತವೆ. ಅಪಘಾತದ 3 ನೇ ದಿನ ದೂರನ್ನು ಕೊಡಲಾಯಿತು ಎಂದರೆ ನಿಜ. ಮೊಟಾರ್ ಸೈಕಲ ಮುಂದುಗಡೆಯಿಂದ ಬಂದು ಡಿಕ್ಕಿ ಹೊಡೆಯಿತು. ಮೊಟಾರ್ ಸೈಕಲನ ಚಾಲಕನ ನಿರ್ಲಕ್ಷತನದಿಂದ ಬಂದು ಡಿಕ್ಕಿ ಹೊಡೆದಿದ್ದಾನೆ ಅಂತಾ ನಮ್ಮ ತಮ್ಮ ದೂರು ಕೊಟ್ಟಿದ್ದಾನೆ ಎಂದರೆ ನಿಜ. ಚಾರ್ಜಶೀಟನಲ್ಲಿ ಕೂಡಾ ಮೊಟಾರ್ ಸೈಕಲ ಸವಾರನ ಮೇಲೆ ಚಾರ್ಜಶೀಟ ಹಾಕಿದ್ದಾರೆ ಎಂದರೆ ನಿಜ.

ಆದ್ದರಿಂದ ಸದರಿ ಅಪಘಾತ ಮೊಟಾರ್ ಸೈಕಲನ ಚಾಲಕನ ನಿರ್ಲಕ್ಷತನದಿಂದ ಆಗಿದೆ ಎಂದರೆ ನಿಜ.

ಸದರಿ ಅಪಘಾತದಲ್ಲಿ ನನಗೆ ಕೇವಲ ಸಾದಾ ಸ್ವರೂಪದ ಗಾಯಗಳಾಗಿವೆ ಎಂದರೆ ಸರಿಯಲ್ಲ. ನಿಪಿ-7 ರಲ್ಲಿ ಕೂಡಾ ನನಗೆ ಸಾದಾ ಸ್ವರೂಪದ ಗಾಯಗಳಾಗಿವೆ ಅಂತಾ ಕಾಣಿಸಿದ್ದಾರೆ ಎಂದರೆ ಸಾಕ್ಷಿಯು ಮೊದಲು ಸರಕಾರಿ ಆಸ್ಪತ್ರೆಯಲ್ಲಿ ದಾಖಲಾಗಿದ್ದು ತದನಂತರ ಶೂಶ್ರುತಾ ಆಸ್ಪತ್ರೆಗೆ ದಾಖಲಲಾದಾಗ ಅಲ್ಲಿ ಸ್ಕ್ಯಾನ್ ಮಾಡಿ ರಾಡ್ ಹಾಕಿರುತ್ತಾರೆ ಎನ್ನುತ್ತಾರೆ. ನಿಪಿ-10 ರಲ್ಲಿಯ ಡಿಸ್ಚಾರ್ಜ ಸಮರಿಯಲ್ಲಿ ನನಗೆ ಅಪಘಾತದಲ್ಲಿ ಗಾಯವಾಗಿದೆ ಅಂಾ ಎಲ್ಲಿಯೂ ಕೂಡಾ ನಮೂದು ಮಾಡಿಲ್ಲ ಎಂದರೆ ಸಾಕ್ಷಿ ಸುಮ್ಮನೆ ನಿಲ್ಲುತ್ತಾರೆ.

ನಿಪಿ-10 ರಲ್ಲಿ ಹಾಜರುಮಾಡಿದ ಅಂತಿಮ ಬಿಲ್ಲು ಕೂಡಾ ಈ ಕೇಸಿಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ಅಪಘಾತದ ಗಾಯಗಳಿಂದ ನನಗೆ ಯಾವುದೇ ರೀತಿಯ ಅಂಗನ್ಯೂನ್ಯತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಆ ಬಗ್ಗೆ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನಗೆ ಸಾದಾ ಸ್ವರೂಪದ ಗಾಯಗಳು ಮಾತ್ರ ಆಗಿದ್ದು ಅವುಗಳನ್ನು ಅತೀ ಹೆಚ್ಚಿನ ಗಾಯಗಳು ಅಂತಾ ತೋರಿಸಲು ನಾನು ನಿಪಿ-10 ರ ಎಲ್ಲಾ ದಾಖಲೆಗಳನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಆಟೋ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಅಂತಾ ನನಗೆ ಗೊತ್ತಿದ್ದರೂ ಕೂಡಾ ನಾನು ಆಟೋ ಮಾಲೀಕ ಹಾಗೂ ವಿಮಾ ಕಂಪನಿಯನ್ನು ವಿನಾಃ ಕಾರಣ ಹಾಗೂ ದುರುದ್ದೇಶಪೂರ್ವಕವಾಗಿ ಈ ಕೇಸಿನಲ್ಲಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ. ಮೋಟಾರ್ ಸೈಕಲ ಸವಾರನ ತಪ್ಪಿನಿಂದಅಪಘಾತ ಆಗಿದ್ದರೂ ಕೂಡಾ ನಾನು ಈ ಕೇಸಿನಲ್ಲಿ ಕೇಳಿದ ಪರಿಹಾರಕ್ಕೆ 4 ನೇ ಎದುರುದಾರ ಬಾಧ್ಯಸ್ಥ ಅಲ್ಲ ಎಂದರೆ ಸರಿಯಲ್ಲ.

ಉಳಿದ ಎದುರುದಾರರು ಅವರ ಪ ವಕೀಲರು ಗೈರು ಹಾಜರು ಇದ್ದದ್ದರಿಂದ ಅವರ ಪರ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ ಹಾನಗಲ್

( ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ಎದುರುದಾರರು ಹಾಗೂ ಅವರ ವಕೀಲರನ್ನು ಕರೆಯಲಾಯಿತು, ಗೈರು ಹಾಜರಿ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

2 ನೇ ಎದುರುದಾರರು ಏಕಪಕ್ಷೀಯವಾಗಿರುವ ಕಾರಣ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.

(ಅರ್ಜಿದಾರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಗಿದೆ)

**(**ಎದುರುದಾರರು ಮತ್ತು ಅವರ ವಕೀಲರನ್ನು ಕರೆಯಲಾಯಿತು. ಗೈರು ಹಾಜರು, ತಕರಾರು ಸಲ್ಲಿಸಿರುವುದಿಲ್ಲ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**)**